ಉಪಾಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ 2.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 18 ನಿಮಿಷಕ್ಕೆ ಮುಕ್ತಾಯಗೊಂಡು, ಪುನ: ಮಧ್ಯಾಹ್ನ 2.30 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು 2 ಗಂಟೆ 57 ನಿಮಿಷಕ್ಕೆ ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಆ) **ವಿಷಯ : ನೆಫೆಡ್ ಕೇಂದ್ರಗಳ ಮೂಲಕ ಖರೀದಿ ಮಾಡುವ ಕೊಬ್ಬರಿಗೆ ಕೊಡುತ್ತಿದ್ದ ಸಬ್ಸಿಡಿಯನ್ನು ನಿಲ್ಲಿಸಿರುವ ಬಗ್ಗೆ.**

ಅಧ್ಯಕ್ಷರು: ಮಾಧುಸ್ವಾಮಿಯವರೆ, ತಾವು ಮಾತನಾಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕೊಬ್ಬರಿಯನ್ನು ಏನು ನೆಫೆಡ್ ಕೇಂದ್ರಗಳ ಮೂಲಕ ಖರೀದಿ ಮಾಡುತ್ತಿದ್ದರು, ಆ ಖರೀದಿ ಜೊತೆಗೆ 600 ರೂ.ಗಳನ್ನು ಸರ್ಕಾರದಿಂದ ಸಬ್ಸಿಡಿಯನ್ನು ರೈತರಿಗೆ ಕೊಡುತ್ತಿದ್ದರು. ಇವತ್ತಿಗೆ ಆ ಸಬ್ಸಿಡಿಯನ್ನು ನಿಲ್ಲಿಸಿಬಿಟ್ಟಿದ್ದೇವೆಂದು ಹೇಳಿ, ಸರ್ಕಾರದಿಂದ ಆದೇಶ ಇದೆ, ಇನ್ನು ಸಬ್ಸಿಡಿ ಸಿಗಲಾರದು ಎಂದು ತಿಳಿದುಕೊಂಡು ಬಿಟ್ಟು ಇವತ್ತು ಕೇಂದ್ರಗಳಲ್ಲಿ ಬಹಳ ಕೊಬ್ಬರಿ ಬಂದು ಬಿಟ್ಟಿದೆ. ಜನ ತೀವ್ರವಾದ ಸಂಕಷ್ಟದಲ್ಲಿ ಸಿಕ್ಕಿಹಾಕಿಕೊಂಡು ಬಿಟ್ಟಿದ್ದಾರೆ. ನಾಳೆಯಿಂದ ನಮಗೆ 600 ರೂ.ಗಳ ಪರ್ ಕ್ವಿಂಟಲ್‌ಗೆ ಲಾಸ್ ಆಗಿ ಬಿಡುತ್ತದೆ. ಹಾಗಾಗಿ ಏನಾದರೂ ಮಾಡಿ ಇವತ್ತು ಕೊಬ್ಬರಿ ತೆಗೆದುಕೊಳ್ಳಬೇಕು. ನಮ್ಮಲ್ಲಿ purchase center ಗಳಲ್ಲಿ ಇವತ್ತು ಅಷ್ಟೊಂದು infrastructure ಗಳು ಇಲ್ಲ. ಇದು ಸುಮಾರು ತುಮಕೂರು ಜಿಲ್ಲೆ, ಹಾಸನ್ ಜಿಲ್ಲೆ, ಚಿತ್ರದುರ್ಗ ಜಿಲ್ಲೆ ಈ ಕಡೆ ಎಲ್ಲಾ ಕೊಬ್ಬರಿಯನ್ನು ಕೊಂಡುಕೊಳ್ಳುತ್ತಾರೆ. ಹೀಗೆ ಸಬ್ಸಿಡಿ ಕೊಡುವುದನ್ನು ಮುಂದುವರೆಸಬೇಕಾಗುತ್ತದೆ. ನಮ್ಮ ಜಿಲ್ಲೆಗಳಿಗೆ ಕೊಟ್ಟಿರುವ ಸಬ್ಸಿಡಿ ಇನ್ನು ಕೂಡ ಪೂರ್ಣ ಖರ್ಚಾಗಿಲ್ಲ. ಇಲ್ಲಿ ರೇಸ್ ಮಾಡುವುದಕ್ಕೆ ಮೊದಲೇ, ಇಲ್ಲಿಯವರೆಗೆ ತರಬಾರದೆಂದು ಹೇಳಿ ನಾನು ಸನ್ಮಾನ್ಯ ಜಿಲ್ಲಾಧಿಕಾರಿಯವರಿಗೆ ಮಾತನಾಡಿದೆ. ನಮಗೆ 15ನೇ ತಾರೀಖಿನ ವರೆಗೆ ಮಾತ್ರ ಅವಕಾಶವಿದೆ ಎಂದು ಹೇಳಿ, ಸರ್ಕಾರದಿಂದ ಆದೇಶ ಇರುವುದರಿಂದ ನಾನು 15ನೇ ತಾರೀಖಿನವರೆಗೆ ಮಾತ್ರ ಅವಕಾಶ ಮಾಡಬಹುದು, ಮಿಕ್ಕಿದ್ದು ಅಲ್ಲಿಯೇ ಏನಾದರೂ ತೀರ್ಮಾನ ವಾಗಬೇಕೆಂದು ಹೇಳಿ ಅವರು ತಿಳಿಸಿದ್ದರ ಮೇರೆಗೆ ನಾನು ತಮ್ಮ

ಅನುಮತಿಯ ಮೇರೆಗೆ ವಿಷಯವನ್ನು ಇಲ್ಲಿ ರೈಸ್ ಮಾಡುತ್ತಿದ್ದೇನೆ. ಯಾರಾದರೂ ಸರ್ಕಾರದ ಪರವಾಗಿ ರೈತರ ಈ ಕಷ್ಟ ನಿವಾರಣೆಗೆ ಬರಬೇಕು. ಇದು ಏನು ನೆಫೆಡ್ ಸಪೋರ್ಟ್ ಪ್ರೈಸ್‌ನಲ್ಲಿ ಕೊಡುತ್ತಿತ್ತು, ಧಾರಣಿ ಬಿದ್ದುಹೋಗಿದೆ ಎಂದು ಹೇಳಿ, ನೆಫೆಡ್‌ನವರು purchase ಮಾಡುವುದರ ಜೊತೆಗೆ ನೀವು 600 ರೂ.ಗಳ ಸಬ್ಸಿಡಿಯನ್ನು ರೈತರಿಗೆ ಕೊಟ್ಟಿರುವುದು ಸ್ವಲ್ಪ ರೈತರು ಉಸಿರಾಡುವಂತಾಗಿದೆ. ಅದು ಇವತ್ತು ನಿಂತುಬಿಟ್ಟರೆ ಬಹಳ ತಾಪತ್ರಯಕ್ಕೆ ಸಿಕ್ಕಿಹಾಕಿಕೊಳ್ಳತ್ತಾರೆ. ದಿಢೀರೆಂದು ಇವತ್ತು ನಿಲ್ಲಿಸುವುದನ್ನು ಇನ್ನು ಕೆಲವು ಕಾಲ ಕನಿಷ್ಟ ನಫೆಡ್‌ನವರು purchase ಮಾಡುವಷ್ಟು ದಿವಸವಾದರೂ ನೀವು ಅಂದರೆ minimum support price ಇರುವಷ್ಟು ದಿವಸವಾದರೂ ನೀವು ಮುಂದುವರೆಸಿ ಕೊಡಬೇಕೆಂದು ಹೇಳಿ ಇವತ್ತೇ ಇಲ್ಲಿ ಒಂದು ತೀರ್ಮಾನವಾಗಬೇಕಾಗಿದೆ. ಸರ್ ಇವತ್ತು 5 ಗಂಟೆಗೆ ಕ್ಲೋಸ್ ಆಗಿ ಬಿಡುತ್ತದೆ. ಅಲ್ಲಿಗೆ ಒಂದು ಮೆಸೇಜ್ ಹೋಗದಿದ್ದರೆ ರಾತ್ರಿ ಎಲ್ಲಾ ಆ ಕೊಬ್ಬರಿಯನ್ನು ತೆಗೆದುಕೊಂಡರೂ ಮುಗಿಯುವುದಿಲ್ಲ. ಏಕೆಂದರೆ ಅಷ್ಟೊಂದು ಕೊಬ್ಬರಿ ಮಾರ್ಕೆಟ್‌ಗೆ ಬಂದು ಬಿಟ್ಟಿದೆ. ಅದಕ್ಕೆ ಯಾರಾದರೂ ಸರ್ಕಾರದ ವತಿಯಿಂದ ತೀರ್ಮಾನ ತೆಗೆದುಕೊಂಡು ಉತ್ತರವನ್ನು ಕೊಡಲಿ ಎಂದು ನಾನು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ (ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಏನು ಪ್ರಸ್ತಾಪ ಮಾಡಿದ್ದಾರೆ, ಇದು ರೈತರಿಗೆ ತುಂಬಾ ಸಮಸ್ಯೆಯಾಗಿರತಕ್ಕಂಥ ಒಂದು ವಿಚಾರವಿದೆ. ನಫೆಡ್‌ನಿಂದ ಏನು ಕೊಬ್ಬರಿಯನ್ನು ಖರೀದಿ ಮಾಡುತ್ತಿದ್ದರು, ಅದು ಇವತ್ತು ಮುಗಿದು ಹೋಗುತ್ತಿರುವ ಅಂಶವನ್ನು ಅವರು ಗಮನಕ್ಕೆ ತಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಾಗೂ ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಈ ಬಗ್ಗೆ ಚರ್ಚೆ ಮಾಡಿ ಇದಕ್ಕೆ ಏನು ಅನುಕೂಲವಾಗಬೇಕೋ ಆ ಪ್ರಯತ್ನವನ್ನು ಸರ್ಕಾರವು ಮಾಡುತ್ತದೆ. ಈ ವಿಷಯವನ್ನು ತಾವು ಈಗ ನನ್ನ ಗಮನಕ್ಕೆ ತಂದಿದ್ದೀರಿ, ಅದಕ್ಕೆ ಏನು ಮಾಡಲು ಸಾಧ್ಯವೋ ಅದನ್ನು ಮಾಡುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಇವತ್ತೆ ಮುಗಿದುಹೋಗುತ್ತದೆ. ಮಾನ್ಯ ಅಧ್ಯಕ್ಷರೆ ನಾನು ಬೆಳಿಗ್ಗೆಯೇ ತಮ್ಮ ಅನುಮತಿಯನ್ನು ಕೇಳಬೇಕೆಂದು ಇದ್ದೆ. 15 ನೇ ತಾರೀಖು ಕ್ಲೋಸ್ ಮಾಡುತ್ತಾರೆ. ಇವತ್ತು ಏನಾದರೂ

ತೀರ್ಮಾನವನ್ನು ಹೇಳದೇ ಇದ್ದರೆ ಅಲ್ಲಿಯ ಜನರು ಕಂಗಾಲಾಗುತ್ತಾರೆ. ತಾವು ಅವರನ್ನು ಕರೆಸಿ ಮಾತನಾಡಬೇಕು.

ಅಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರೆ, ತಾವು brief ಆಗಿ ಮಾತನಾಡಿ. ಇವತ್ತು ಚರ್ಚೆಯು ಮುಕ್ತಾಯವಾಗಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾನು ಅಂತು ಮುಕ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಚರ್ಚೆಯಾದ ನಂತರ ಸರ್ಕಾರದಿಂದ ಉತ್ತರ ಇವೆಲ್ಲ ಆಗಬೇಕು.

ಇ) ವಿಷಯ : ಕಾವೇರಿ ನ್ಯಾಯ ಮಂಡಳಿ ತೀರ್ಪಿನ ಬಗ್ಗೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಸನ್ಮಾನ್ಯ ಅಧ್ಯಕ್ಷರೇ, ಈ ಕಾವೇರಿಯ ವಿಚಾರ ನಮ್ಮ ಸದನದಲ್ಲಿ ಚರ್ಚೆಯಾಗತಕ್ಕಂಥದ್ದು, ನಮ್ಮ ಸದನ ಕಾವೇರಿ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ವ್ಯಯ ಮಾಡಿರುವಂತಹ ಸಮಯ ಬಹುಶ: ನಮ್ಮ ರಾಜ್ಯದ ಯಾವುದೇ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ನಮ್ಮ ಸದನದಲ್ಲಿ ವಿನಿಯೋಗಿಸಿಲ್ಲ. ಅದು ಇವತ್ತಿನದಲ್ಲ, ಪ್ರಾರಂಭದಿಂದಲೂ ಕಾವೇರಿ ವಿಚಾರ ಪ್ರಸ್ತಾಪ ಅಗಿರುವುದನ್ನು ತೆಗೆದುಕೊಂಡರೆ ಇಷ್ಟು ಸಮಯವನ್ನು ಬೇರೆ ಯಾವುದಕ್ಕೂ ನಾವು ವಿನಿಯೋಗಿಸಿಲ್ಲ. ಅಷ್ಟು ಚರ್ಚೆಯಾಗಿದೆ, ಅಷ್ಟು ನಿರ್ಣಯಗಳು ಆಗಿದೆ. ಅಷ್ಟೆಲ್ಲಾ ತೀರ್ಮಾನಗಳು ಆಗಿದೆ. ಆದರೂ ಕೂಡ ಕಾವೇರಿ ವಿಚಾರ ಇನ್ನು ಮುಗಿದಿಲ್ಲ. ಅದು ಮುಗಿಯುವುದಿಲ್ಲ, ಏಕೆಂದರೆ, ಅಂತರ್‌ರಾಜ್ಯ ನದಿನೀರಿನ ವಿವಾದಗಳು ಏನಿದೆ, ಇವು ಭಾರಿ ಸೂಕ್ಷ್ಮವಾದಂತಹ ವಿಚಾರಗಳು. ವಾಸ್ತವಿಕ ನೆಲೆಗಟ್ಟಿನಲ್ಲಿ ಈ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಬೇಕೇ ಹೊರತು, ಯಾವುದೇ ಒಂದು ರಾಜ್ಯ ನೀರಿನ ಹಾಗೂ ಗಡಿಯ ವಿಚಾರದಲ್ಲಿ ಭಾವನಾತ್ಮಕವಾದ ಭಾವನೆಗಳಿಗೆ ಒಳಗಾಗಬಾರದು. ಭಾವನಾತ್ಮಕವಾದಂತಹ ವಿಚಾರಗಳನ್ನು ಚರ್ಚೆ ಮಾಡಬಾರದು. ಏಕೆಂದರೆ, ನಾವು ಒಕ್ಕೂಟ ವ್ಯವಸ್ಥೆಯಲ್ಲಿರುವಂತಹ ಜನರಾಗಿದ್ದೇವೆ. ನಮ್ಮದು ಒಕ್ಕೂಟ ವ್ಯವಸ್ಥೆಯಾಗಿದೆ. ಈ ಒಕ್ಕೂಟ ವ್ಯವಸ್ಥೆ ಎಂದರೆ, ಮೊದಲು ಭಾರತದೇಶ ನಮ್ಮದು. ಆಮೇಲೆ ಬೇರೆ ರಾಜ್ಯಗಳದು, ಈ ಒಕ್ಕೂಟ ವ್ಯವಸ್ಥೆಯನ್ನು ನಾವು ಎಲ್ಲಿಯವರೆಗೆ ಒಪ್ಪಿಕೊಂಡಿರುತ್ತೇವೆಯೋ ಅಲ್ಲಿಯವರೆವಿಗೂ ಯಾವುದೇ ಕಾರಣಕ್ಕೂ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಬರದಂತಹ ರೀತಿಯಲ್ಲಿ ನೋಡಿಕೊಳ್ಳಬೇಕಾಗಿರುವಂಥದ್ದು ನಮ್ಮೆಲ್ಲರ ಪ್ರಥಮ ಜವಾಬ್ದಾರಿಯಾಗಿದೆ. ಇನ್ನು ಎರಡನೆಯದಾಗಿ ಹೇಳುವುದಾದರೆ, ಯಾವುದೇ ಒಂದು ಸಮಸ್ಯೆಯ